ಹುಂಡೇಕರ್ ಸಮಿತಿಯ ಶಿಫಾರಸ್ಸು ಮತ್ತು ಗದ್ದೇಗೌಡ ಸಮಿತಿ ಶಿಫಾರಸ್ಸಿನ ಬಗ್ಗೆ

೧೬೯೧ ಶ್ರೀ ಶಿವಶೇಖರಪ್ಪಗೌಡ ಶರವಾಳ್ (ಶಹಾಪುರ).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದಾಗಿ ರಚನೆಯಾಗುವ ಜಿಲ್ಲೆ ಮತ್ತು ತಾಲ್ಲೂಕುಗಳೆಷ್ಟು ? ಆ ಪೈಕಿ ಹುಂಡೇಕರ್ ಸಮಿತಿಯ ಶಿಫಾರಸ್ಸು ಮಾಡಿದವೆಷ್ಟು, ಹಾಗೂ ಗದ್ದೇಗೌಡ ಸಮಿತಿಯು ಶಿಫಾರಸ್ಸು ಮಾಡಿದವೆಷ್ಟು, ಹಾಗೂ ಅವು ಯಾವುವು ?

ಆ) ಹುಂಡೇಕರ್ ಸಮಿತಿಯಲ್ಲಿ ಶಿಫಾರಸ್ಸು ಮಾಡಿದ ತಾಲ್ಲೂಕು ಮತ್ತು ಜಿಲ್ಲೆಗಳು ಗದ್ದೇಗೌಡ ಸಮಿತಿಯಲ್ಲಿ ಮಾಡಲಾದ ಶಿಫಾರಸ್ಸುಗಳಲ್ಲಿ ಅಡಕವಾಗಿದೆಯೇ ?

ಇ) ಇವುಗಳನ್ನು ಯಾವ ಆಧಾರದ ಮೇಲೆ ರಚಿಸಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸ್ಸು ಮಾಡಿರುವ

೧) ಹೊಸ ಜಿಲ್ಲೆಗಳ ಸಂಖ್ಯೆ ೯

೨) ತಾಲ್ಲೂಕುಗಳ ಸಂಖ್ಯೆ ೩೦

ಇವುಗಳ ಪೈಕಿ ಶ್ರೀ ಹುಂಡೇಕರ್ ಸಮಿತಿ ಶಿಫಾರಸ್ಸು ಮಾಡಿರುವ

೧) ಹೊಸ ಜಿಲ್ಲೆಗಳು ೮

೨) ಹೊಸ ತಾಲ್ಲೂಕುಗಳು ೨೭

ಶ್ರೀ ಗದ್ದೇಗೌಡರು ಸಮಿತಿ ಶಿಫಾರಸು ಮಾಡಿರುವ

೧) ಹೊಸ ಜಿಲ್ಲೆಗಳು ೨

೨) ಹೊಸ ತಾಲ್ಲೂಕುಗಳು ೩

ಇವುಗಳ ವಿವರಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಆ) ಹೌದು.

ಇ) ಇವುಗಳಿಗೆ ಜಿಲ್ಲಾ ಪುನರ್ ವಿಂಗಡಣಾ ಸಮಿತಿಯು ಆಡಳಿತಾತ್ಮಕ ಅನುಕೂಲ, ಸಾರ್ವಜನಿಕರ ಅನುಕೂಲತೆ, ಕಾನೂನುಪಾಲನೆ ವ್ಯವಸ್ಥೆ, ಅಭಾವ ಪರಿಸ್ಥಿತಿ, ದೂರಸಂಪರ್ಕ, ಇತ್ಯಾದಿ ಅಂಶಗಳನ್ನು ಆಧಾರವಾಗಿ ತೆಗೆದುಕೊಂಡಿದೆ.

ಅನುಬಂಧ

ಶ್ರೀ ಹುಂಡೇಕರ್ ಸಮಿತಿ ಮತ್ತು ಶ್ರೀ ಗದ್ದೀಗೌಡರ ಸಮಿತಿಯು ವರದಿಗಳಲ್ಲಿ ಶಿಫಾರಸ್ಸು ಮಾಡಿರುವ ಹೊಸ ಜಿಲ್ಲೆಗಳು ಮತ್ತು ತಾಲ್ಲೂಕುಗಳು.

ಅ) ಶ್ರೀ ಹುಂಡೇಕರ್ ಸಮಿತಿ		ಶ್ರೀ ಗದ್ದೀಗೌಡರ್ ಸಮಿತಿ	
	ಹೊಸ ಜಿಲ್ಲೆಗಳು		
೧	ನಂಜನಗೂಡು	೧	ಗೋಕಾಕ್
೨	ಉಡುಪಿ	೨	ಕೊಪ್ಪಳ
೩	ಬೆಂಗಳೂರು ನಗರ	ಆ)	ಹುಂಡೇಕರ್ ಸಮಿತಿ ಶಿಫಾರಸ್ಸು ಮಾಡಿದ ಹಾವೇರಿ ಜಿಲ್ಲೆಯ ರಚನೆ ತೆಗೆದುಹಾಕಲಾಗಿದೆ.
೪	ದಾವಣಗೆರೆ		
೫	ಬಾಗಲಕೋಟೆ		
೬	ಗದಗ		
೭	ಹಾವೇರಿ		
೮	ಯಾದ್‌ಗಿರಿ	ಇ)	ನಂಜನಗೂಡು ರಚನೆಗೆ ಬದಲಾಗಿ ಚಾಮರಾಜನಗರ ಜಿಲ್ಲೆ ರಚನೆಗೆ ಶಿಫಾರಸ್ಸು ಮಾಡಲಾಗಿದೆ.
ಆ)	**ಹೊಸ ತಾಲ್ಲೂಕುಗಳು**		
೧	ರಾಂಪುರ (ಮೈಸೂರು ಜಿಲ್ಲೆ)	೧	ದರ್ಮಪುರ(ಚಿತ್ರದುರ್ಗ ಜಿಲ್ಲೆ)
೨	ಮೂಲ್ಕಿ (ದ.ಕ.)	೨	ನಿಪ್ಪಾಣಿ (ಬೆಳಗಾಂ ಜಿಲ್ಲೆ)
೩	ಕಡಬ (ದ.ಕ.)	೩	ಲಕ್ಷ್ಮೇಶ್ವರ (ಧಾರವಾಡ)
೪	ಬೈಂದೂರು (ದ.ಕ.)	ಆ	ಹುಂಡೇಕರ್ ಸಮಿತಿಯಲ್ಲಿ ಶಿಫಾರಸು ಮಾಡಲಾದ ರಾಂಪುರ ತಾಲ್ಲೂಕಿಗೆ ಬದಲಾಗಿ ಹನೂರು ತಾಲ್ಲೂಕು ರಚನೆಗೆ ಗದ್ದೀಗೌಡರ ಸಮಿತಿ ಶಿಫಾರಸ್ಸು ಮಾಡಿದೆ.
೫	ಬ್ರಹ್ಮಾವರ (ದ.ಕ.)		
೬	ಮೂಡಬಿದರೆ (ದ.ಕ.)		
೭	ಸಾತನೂರು (ಬೆಂಗಳೂರು ಜಿಲ್ಲೆ)		
೮	ಕೆ ಜಿ.ಎಫ್. ಸಿಟಿ (ಕೋಲಾರ ಜಿಲ್ಲೆ)		
೯	ಕಿತ್ತೂರು (ಬೆಳಗಾಂ ಜಿಲ್ಲೆ)	ಇ	ಹುಂಡೇಕರ್ ಸಮಿತಿಯು ಶಿಫಾರಸ್ಸು ಮಾಡಿದ ಇತರೆ ಎಲ್ಲಾ ತಾಲ್ಲೂಕುಗಳ ರಚನೆಗೆ ಶ್ರೀ ಗದ್ದೀಗೌಡರ ಸಮಿತಿ ಒಪ್ಪಿಗೆ ಸೂಚಿಸಿದೆ.
೧೦	ಬುಬುಲೇಶ್ವರ (ಬಿಜಾಪುರ ಜಿಲ್ಲೆ)		
೧೧	ನಿಡಗುಂದಿ ,,		
೧೨	ತಾಳೀಕೋಟೆ ,,		
೧೩	ಚಾದಚನ್ ,,		
೧೪	ಗುಳೇದಗುಡ್ಡ ,,		
೧೫	ಇಳಕಲ್ ,,		
೧೬	ಗಜೇಂದ್ರಗಡ (ಧಾರವಾಡ ಜಿಲ್ಲೆ)		
೧೭	ಗುಲ್ಬರ್ಗ (ಉತ್ತರ ಗುಲ್ಬರ್ಗ ಜಿಲ್ಲೆ)		
೧೮	ಯಡ್ರಾಮಿ ,,		
೧೯	ಗುರಮಿಟ್ಕಲ್ ,,		
೨೦	ಪಾಡ್ಗೇರಾ ,,		

೨೧ ಹುನಸಗಿ ,,
೨೨ ಶಹಾಬಾದ್ ,,
೨೩ ಕಲಗಿ ,,
೨೪ ಬಳ್ಳಾರಿ (ಕು) (ಬಳ್ಳಾರಿ ಜಿಲ್ಲೆ)
೨೫ ಚಿಟಗುಪ್ಪ (ಬೀದರ್ ಜಿಲ್ಲೆ)
೨೬ ಕರಟಗಿ (ರಾಯಚೂರು ಜಿಲ್ಲೆ)
೨೭ ಮಾಸ್ಕಿ ,,

ಈಗಾಗಲೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರ ಹೇಳಿದ್ದೇನೆ. ೩ ತಿಂಗಳೊಳಗೆ ಮಂತ್ರಿ ಮಂಡಲದ ಮುಂದೆ ಇದನ್ನು ಮಂಡಿಸುತ್ತೇನೆ. ನಂತರ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್.— ಜಿಲ್ಲಾ ಪುನರ್ ವಿಂಗಡಣೆ ಸಮಿತಿಯವರು ಕೊಟ್ಟಂತ ಹೆಸರುಗಳಲ್ಲಿ ನಂಜನಗೂಡು, ಉಡುಪಿ, ಬೆಂಗಳೂರು ನಗರ, ಗದಗ್, ಹಾವೇರಿ, ಇವೆ. ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿಗೆ ಹುಂಡೇಕರ್ ಸಮಿತಿಯವರು ಭೇಟಿ ಮಾಡಿದ್ದರು. ಈ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವುದಕ್ಕೆ ಎಲ್ಲಾ ರೀತಿಯ ಅನುಕೂಲತೆ ಇದೆ. ಭೀಮರಾಯನಗುಡಿಯಲ್ಲಿರುವ, ಕಾಡಾ, ಅಡ್ಮಿನಿಸ್ಟ್ರೇಟಿವ್ ಆಫೀಸನ್ನು ಜಿಲ್ಲಾ ಕಛೇರಿಗೆ ಬಿಟ್ಟು ಕೊಡುತ್ತೇವೆ. ಕೃಷ್ಣಮೇಲ್ದಂಡೆ ಯೋಜನೆಯ, ಮುಖ್ಯ ಅಭಿಯಂತರವರ ಕಛೇರಿ ಇದೆ, ಇದನ್ನು ಶಹಾಪುರ ತಾಲ್ಲೂಕು ಬೃಹದಾಕಾರವಾಗಿ ಬೆಳೆಯುತ್ತಿರುವುದನ್ನು ಇದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದೆವು. ಆದರೆ ಇದೇ ಸಮಿತಿಯವರು ಎರಡನೇ ಸಲ ಭೇಟಿ ಮಾಡಿದಾಗ, ಯಾದಗೀರ್‌ಗೆ ಬೇಟಿ ನೀಡಿ, ಯಾದಗೀರ್ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆಯೆಂದು ತಿಳಿದುಬಂದಿದೆ ಜಿಲ್ಲಾ ಕೇಂದ್ರಕ್ಕೆ ಎಲ್ಲಾ ದೃಷ್ಟಿಯಿಂದಲೂ ಅನುಕೂಲತೆ ಇರುವ ಶಹಾಪುರ್ ತಾಲ್ಲೂಕನ್ನೇ ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೆಲವು ಆಧಾರಗಳ ಮೇಲೆ ಸಮಿತಿಯವರು ಶಿಫಾರಸ್ಸು ಮಾಡಿದ್ದಾರೆ. ಜಿಲ್ಲೆ ಮಾಡುವಾಗ ವಿವಾದಗಳು ಬರುವುದು ಸಹಜ. ನಿಮ್ಮ ಇಚ್ಛೆ ಏನು ಇದೆ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಿ, ಸರ್ಕಾರ ನಿರ್ಣಯ ತೆಗೆದುಕೊಳ್ಳುವಾಗ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್.— ತಾಲ್ಲೂಕು ಕೇಂದ್ರಗಳ ಹೆಸರುಗಳಲ್ಲಿ ಕೆಂಭಾವಿ ಮತ್ತು ಹುಣಸಿಗೆ ಇದೆ. ಹುಣಸಿಗೆ ಬದಲು ಕೆಂಭಾವಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಒಂದು ಪತ್ರವನ್ನು ತಮ್ಮ ಮುಖಾಂತರ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಾವು ಕಳುಹಿಸಿಕೊಡಿ, ಸರ್ಕಾರ ನಿರ್ಣಯ ತೆಗೆದುಕೊಳ್ಳುವಾಗ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೪-೫ ದಿವಸಗಳ ಹಿಂದೆ ಈ ವಿಷಯ ಸದನದಲ್ಲಿ ಚರ್ಚೆಗೆ ಬಂತು. ಆ ಸಂದರ್ಭದಲ್ಲಿ ಪ್ರತಿ ವರ್ಷ ೩-೪ ಜಿಲ್ಲೆಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ಮಂತ್ರಿಗಳು ಹೇಳಿಸಿದ್ದರು. ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಯಾವ ಹಿಂದುಳಿದ ಭಾಗಗಳು ಇವೆ ಅವುಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬೈಫರ್‌ಕೇಟ್ ಮಾಡುವುದು ಅವಶ್ಯಕವೆಂದು ಹೇಳಿದ್ದೆ, ಇದರ ಬಗ್ಗೆ ತಾವು ಏನು ಹೇಳುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ —ಮೂರು ತಿಂಗಳೊಳಗೆ ಮಂತ್ರಿ ಮಂಡಲದ ಮುಂದೆ ವಿವರವಾದ ಟಿಪ್ಪಣಿಯೊಂದಿಗೆ ಇಟ್ಟು ನಾನು ಮಂಡಿಸುತ್ತೇನೆ. ಆವೇಲೆ ಹಣಕಾಸಿನ ಅನುಕೂಲತೆಯನ್ನು ನೋಡಿಕೊಂಡು ಹಂತಹಂತವಾಗಿ ಮಾಡತಕ್ಕ ವಿಚಾರವನ್ನು ಹೇಳಿದ್ದೇನೆ. ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳಬೇಕು. Cabinet will take a decision. I place the Committee report before the Cabinet.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾವ ಹಿಂದುಳಿದ ಭಾಗ ಇದೆ. ಅದಕ್ಕೆ ಹಾಗೂ Are you going to give importance to such of the district which are geographically bigger in the entire State ?

ಶ್ರೀ ಎಸ್. ಆರ್. ಬೊಮ್ಮಾಯಿ.— ಹಿಂದುಳಿದ ಕ್ಷೇತ್ರಗಳಿಗೆ, ಅದರಲ್ಲಿಯೂ ದೊಡ್ಡ ಕ್ಷೇತ್ರಗಳಿಗೆ ಪ್ರಾಶಸ್ತ್ಯ ಕೊಡಬೇಕಾದುದು ಸರ್ಕಾರದ ಕರ್ತವ್ಯ.

ಶ್ರೀ ಡಿ. ಟಿ. ಜಯಕುಮಾರ್.— ನಾನು ಕೂಡ ಇದೇ ಪ್ರಶ್ನೆಯನ್ನು ಹಾಕಿದ್ದೆ, ಹುಂಡೇಕರ್ ಸಮಿತಿಯವರು, ನಂಜನಗೂಡಿಗೆ, ಭೇಟಿ ನೀಡಿ, ನಂಜನಗೂಡನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿದ ಮೇಲೆ ನಂಜನಗೂಡಿನ ಜನತೆ ಬಹಳ ಸಂತಸಪಟ್ಟರು. ಆದರೆ ಗದ್ದಲಗೌಡ ಸಮಿತಿಯವರು ಚಾಮರಾಜನಗರವನ್ನು ಜಿಲ್ಲಾಕೇಂದ್ರವನ್ನಾಗಿ ಮಾಡಬೇಕೆಂಬ ನಿಲುವನ್ನು ತೆಗೆದುಕೊಂಡಿದ್ದಾರೆ. ಈ ರೀತಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಾರಣವೇನು ? ನಂಜನಗೂಡಿನಲ್ಲಿ ಜಿಲ್ಲಾ ಕೇಂದ್ರಕ್ಕೆ ಬೇಕಾದ ಎಲ್ಲಾ ರೀತಿಯ ಇನ್‌ಫ್ರಾಸ್ಟ್ರಕ್ಚರ್ ಇದೆ. ನೀರಿನ ಸೌಕರ್ಯ, ಕೂಡ ಇದೆ. ಆದ್ದರಿಂದ ನಂಜನಗೂಡನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ — ಸಮಿತಿಯು ಶಿಫಾರಸ್ಸು ಮಾಡಿದ್ದುದು ಅಂತಿಮವೇನಲ್ಲ-ಸರ್ಕಾರ ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳುವಾಗ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಬಿ ಶಾಣಪ್ಪ.— ಹುಂಡೇಕರ್ ಸಮಿತಿಯವರು, ವಾಸುದೇವರಾವ್ ಸಮಿತಿಯವರು ನಮ್ಮ ಗುಲ್ಬರ್ಗ ಜಿಲ್ಲೆಯ ಯಾದಗೀರ್, ಹುಣಸಿಗಿ, ಶಹಬಾದ್, ಹೈದರಾಬಾದ್ ಕರ್ನಾಟಕದಲ್ಲಿಯೇ ದೊಡ್ಡ ಕೈಗಾರಿಕಾ ಸ್ಥಳ ದೊಡ್ಡ ತಾಲ್ಲೂಕು, ಇಕಾಲಾಜಿಕಲ್ ಕಂಡೀಷನ್ ಇದ್ದು, ಜನರಿಗೆ ಎಲ್ಲಾ ರೀತಿಯ ಸೌಲಭ್ಯವಿದೆ. ಇದನ್ನು ಪೊಲಿಟಿಕಲ್ ಡಿಸಿಷನ್ ಆಗಿ ತೆಗೆದುಕೊಳ್ಳದೆ, based on the facts and figure in the area ಶಹಾಬಾದ್ ತಾಲ್ಲೂಕು, ದೊಡ್ಡ ಊರಿರುವುದರಿಂದ ಅದನ್ನು ಜಿಲ್ಲೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಾಸ್ತವಿಕ ಪರಿಸ್ಥಿತಿಯನ್ನು ನೋಡಿಕೊಂಡು ಸಾರ್ವಜನಿಕರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ,— ಈ ವಿಚಾರವನ್ನು ನಾವು ರಾಜಕೀಯವಾಗಿ ನೋಡುವುದಿಲ್ಲ. ಸಾರ್ವಜನಿಕರಿಗೆ ಅನುಕೂಲ ಆಗುವುದು ಬಹಳ ಅವಶ್ಯಕವಾಗಿದೆ. ಅವುಗಳ ಆಧಾರದಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿಶ್ವನಾಥ ರೆಡ್ಡಿ (ಮಾಲೂರ್).— ಅಧ್ಯಕ್ಷರೆ, ಹುಂಡೇಕರ್ ಸಮಿತಿಯ ವರದಿ ಮತ್ತು ಗದ್ದಲಗೌಡ ಸಮಿತಿಯ ವರದಿಗಳನ್ನು ಸದಸ್ಯರಿಗೆ ಕೊಡಬೇಕೆಂದು ವಿನಂತಿಸುತ್ತೇನೆ. ಹುಂಡೇಕರ್ ಸಮಿತಿಯವರು, ಯಾದಗೀರ್ ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಎಲ್ಲಾ ದೃಷ್ಟಿಯಿಂದಲೂ ಯಾದಗೀರ್ ತಾಲ್ಲೂಕು ಅನುಕೂಲವಿದೆ. ಅಲ್ಲಿ ರೈಲ್ವೆ ಸ್ಟೇಷನ್ ಇದೆ. ಜನಸಂಖ್ಯೆ ಕೂಡ ಜಾಸ್ತಿ ಇದೆ. ಭೌಗೋಳಿಕ ದೃಷ್ಟಿಯಿಂದಲೂ ಅನುಕೂಲವಿದೆ.

ಶ್ರೀ ಮಂದನ ಗೋಪಾಲ ನಾಯಕ್.— ಮಾನ್ಯ ಅಧ್ಯಕ್ಷರೇ, ವಾಸುದೇವರಾವ್ ಕಮಿಟಿಯ ವರದಿ ಪ್ರಕಾರ ಪ್ರಥಮವಾಗಿ ಜಿಲ್ಲೆ ಮಾಡಿರುವುದು ಸಿರಹಟ್ಟಿ, ಸಿರಹಟ್ಟಿಯನ್ನು ಮೊದಲು ಡಿವಿಜನ್ ಹೆಡ್ ಕ್ವಾರ್ಟರ್ಸ್ ಮಾಡಿದರು ಆಮೇಲೆ ಸಬ್ ಡಿವಿಜನ್ ಹೆಡ್ ಕ್ವಾರ್ಟರ್ಸ್ ಮಾಡಿದರು ಆನಂತರ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಮಾಡಿದರು ಈಗ ವಾಸುದೇವರಾವ್ ಸಮಿತಿಯವರು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಡಿಸ್ಟ್ರಿಕ್ಟ್ ಮಾಡುತ್ತೇವೆಂದು ಹೇಳಿ ಅದನ್ನು ತೆಗೆದು ಯಾದಗೀರ್ ಮಾಡಿರುತ್ತಾರೆ. ಇದನ್ನು ತೆಗೆಯಲಿಕ್ಕೆ ಕಾರಣಗಳೇನು ? ಮಾನ್ಯ ಶಿವಶೇಖರಪ್ಪಗೌಡ ಶಿರವಾಳ ರವರು ಕೊಟ್ಟಿರುವ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಒಂದು ಡಿಸ್ಟ್ರಿಕ್ಟ್ ಮಾಡಬೇಕಾದರೆ ಇವುಗಳಿಗೆ ಜಿಲ್ಲಾ ವುನರ್ ವಿಂಗಡಣಾ ಸಮಿತಿಯು ಆಡಳಿತಾತ್ಮಕ ಅನುಕೂಲ, ಸಾರ್ವಜನಿಕರ ಅನುಕೂಲತೆ, ಕಾನೂನು ಪಾಲನೆ ವ್ಯವಸ್ಥೆ, ಅಭಾವ ಪರಿಸ್ಥಿತಿ ದೂರ ಸಂಪರ್ಕ, ಇತ್ಯಾದಿ ಅಂಶಗಳನ್ನು ಆಧಾರವಾಗಿ ತೆಗೆದುಕೊಂಡಿರುತ್ತಾರೆಂದು ಹೇಳಿದ್ದಾರೆ ಇದೆಲ್ಲಾ ಆಧಾರಗಳು ಸಿರವಾರಕ್ಕೆ ಇದೆಯೇ ಇಲ್ಲವೇ ತಿಳಿಸಬೇಕು?

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಬಹಳಷ್ಟು ವರದಿಗಳನ್ನು ಒಪ್ಪಿಸಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ ವರದಿಗಳನ್ನು ಕಳೆದ ಅಧಿವೇಶನದಲ್ಲಿಯೇ ಒಪ್ಪಿಸಿದ್ದಾರೆ ಅವರು ಮಾಡಿರುವ ಶಿಫಾರಸು ಇದೆ. ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಮಂತ್ರಿ ಮಂಡಲದ ಮುಂದೆ ಇದು ಬಂದ ಮೇಲೆ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ಈ ವಿಚಾರ ತೆಗೆದು ಕೊಳ್ಳುವ ಮುನ್ನ ಚರ್ಚೆಗೆ ಬರಲಿ ಎಂದು ಹೇಳುತ್ತೇನೆ.

ಶ್ರೀ ಎಸ್ ಆರ್. ಬೆಮ್ಮಾಯಿ —ಈ ಮನೆಯಲ್ಲಿ ಚರ್ಚೆಗೆ ಬರಬೇಕು. ಸಲಹೆ ಸೂಚನೆಗಳು ಬರಬೇಕು. ಸದಸ್ಯರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆಗೆ ನಿಗದಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳ ಸಂಖ್ಯೆ-೯, ತಾಲ್ಲೂಕುಗಳ ಸಂಖ್ಯೆ ೩೦ ಮಾನ್ಯ ಹುಂಡೇಕರ್ ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳು-೮ ಹೊಸ ತಾಲ್ಲೂಕುಗಳು ೨೭, ಮಾನ್ಯ ಗದ್ದೀಗೌಡರು ಸಮಿತಿ ಶಿಫಾರಸ್ಸು ಮಾಡಿರುವ ಪ್ರಕಾರ ಹೊಸ ಜಿಲ್ಲೆಗಳು-೨ ಹೊಸ ತಾಲ್ಲೂಕುಗಳು-೩. ಆದರೆ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸ್ಸು ಮಾಡಿರುವ ಹೊಸ ೯ ಜಿಲ್ಲೆಗಳು ಮತ್ತು ಹೊಸ ತಾಲ್ಲೂಕುಗಳು ಯಾವು ಯಾವುವು ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಟ್ಟಿಯನ್ನು ಕೊಡಲಾಗಿದೆ.

ಅಧ್ಯಕ್ಷರು.—ಇದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇವೆ ತಾವು ಕಂಳಿತುಕೊಳ್ಳಿ.

ಮಾನ್ಯ ಒಬ್ಬ ಸದಸ್ಯರು.—ವಾಸುದೇವರಾವ್ ಕಮಿಟಿ ಶಿಫಾರಸ್ಸಿನ ಪ್ರಕಾರ ಶಿರಗುಪ್ಪ ಜಿಲ್ಲಾ ಕೇಂದ್ರ ಆಗಬೇಕೆಂದು ಇತ್ತು. ಯಾವಾಗ ಇದನ್ನು ಮಂತ್ರಿಗಳು ಮಾಡುತ್ತಾರೆ. ಯಾವಾಗ ಆಗುತ್ತದೆ ಎಂದು ಸದನದಲ್ಲಿ ಹೇಳಬೇಕು ?

ನಂಜನಗೂಡು ತಾಲ್ಲೂಕಿನಲ್ಲಿ 'ಅಂಗನವಾಡಿ''ಗಳನ್ನು ತೆರೆಯುವುದು.

೧೫೬೬ ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(೧) ನಂಜನಗೂಡು ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷದಿಂದ ಅಂಗನವಾಡಿಗಳನ್ನು ತೆರೆಯಲು ಸರ್ಕಾರವು ತೀರ್ಮಾನಿಸಿದೆಯೇ ?

(೨) ಇದುವರೆಗೂ ಅಂಗನವಾಡಿ ಮಂಜೂರು ಮಾಡದಿರಲು ಕಾರಣವೇನು ? ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

(೧) ಇಲ್ಲ.

(೨) ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಜನ ಸಂಖ್ಯೆ ಇರುವ ಹಾಗೂ ಬರ ಪೀಡಿತ ತಾಲ್ಲೂಕುಗಳಿಗೆ ಆದ್ಯತೆಯ ಮೇರೆಗೆ (ಐಸಿಡಿಎಸ್) ಯೋಜನೆಯನ್ನು ಸರಕಾರವು ಮಂಜೂರು ಮಾಡುವ ಮುಖಾಂತರ ಅಂಗನವಾಡಿಗಳನ್ನು ಪ್ರಾರಂಭಿಸಲಾಗುತ್ತಿದೆ. ಸದ್ಯಕ್ಕೆ ಸಮಗ್ರ ಬಾಲವಿಕಾಸ ಯೋಜನೆ ಇಲ್ಲದ ತಾಲ್ಲೂಕುಗಳಿಗೆ ಸರಕಾರವು ಸದರಿ ಯೋಜನೆಯನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ನಂಜನಗೂಡು ತಾಲ್ಲೂಕು ಹಿಂದುಳಿದ ಪ್ರದೇಶವೆಂದು ಮಾನ್ಯ ಸಚಿವರಿಗೆ ಗೊತ್ತಿದೆ. ಐಸಿಡಿಎಸ್ ಯೋಜನೆ ಪ್ರಕಾರ ಅಂಗನವಾಡಿಗಳನ್ನು ತೆರೆಯಲಾಗುತ್ತದೆಂದು ಹೇಳಿದ್ದಾರೆ. ಅಂಗನವಾಡಿಗಳು ಇಲ್ಲದ ಕಡೆ ಬಾಲ ವಿಕಾಸ ಯೋಜನೆಯು ಅಡಿಯಲ್ಲಿ